ಆ) ಪ್ರತಿ ದಿನ ಸುಮಾರು 22.45 ಮಿಲಿಯನ್ ಲೀಟರ್ ಕಲುಷಿತ ನೀರನ್ನು ಮಂಗಳೂರು ಮಹಾನಗರ ಪಾಲಿಕೆಯಿಂದ ಉತ್ಪತ್ತಿಯಾಗುತ್ತಿದ್ದು, ಇದರಲ್ಲಿ ಬಹುಪಾಲು ಮಾಲಿನ್ಯ ನೀರು ಅರಬ್ಬಿ ಸಮುದ್ರಕ್ಕೆ ಸೇರುತ್ತದೆ. ಇದರಿಂದ ಜಲಚರಗಳು ಮೇಲೆ ದುಷ್ಪರಿಣಾಮವಾಗುತ್ತಿರುವ ಬಗ್ಗೆ ಇದೂವರೆಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಯಾವುದೇ ರೀತಿಯ ದೂರು ಬಂದಿರುವುದಿಲ್ಲ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಮಂಗಳೂರು ನಗರ ಪಾಲಿಕೆಗೆ ಒಳಚರಂಡಿ ಮತ್ತು ಶುದ್ಧೀಕರಣ ಘಟಕಗಳನ್ನು ಅಳವಡಿಸುವಂತೆ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ 1974 ರ ಅಡಿಯಲ್ಲಿ ಸೂಚನೆ ನೀಡಿರುತ್ತದೆ. ಗೃಹ ಮತ್ತು ನಗರಾಭಿವೃದ್ಧಿ ಇಲಾಖೆಗೆ ಸಹ ಈ ಬಗ್ಗೆ ನಗರ ಪಾಲಿಕೆಗೆ ನೀಡಲು ಕೋರಿಕೊಳ್ಳಲಾಗಿದೆ.

ವಿಷಯ :- ಡ್ಯಾನಿಡಾ ಸಹಯೋಜಿತ ಪರಿಸರಾಧ್ಯಯನ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳ ಕುರಿತು.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2391 (2986)

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) :- ಮಾನ್ಯ ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಪರಿಸರ ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯ ಸರ್ಕಾರದ ಸಹ ಭಾಗಿತ್ವದೊಂದಿಗೆ ಹಾಕಿಕೊಂಡಿರುವ ಡ್ಯಾನಿಡಾ ಸಹಯೋಜನೆ ಪರಿಸರಾಧ್ಯಯನ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳಾವುವು (ವಿವರಗಳನ್ನು ತಿಳಿಸಿರಿ)

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಾಸ್ತಾವಿಕ ಕ್ರಿಯಾ ಯೋಜನೆಯೇನು?

ಇ) ಸದರಿ ಕ್ರಿಯಾ ಯೋಜನೆ ಈಗ ಯಾವ ಹಂತದಲ್ಲಿದೆ ಇದೇ ರೀತಿ ಇನ್ನಿತರ ವಿದೇಶಿ ಸಹಭಾಗಿತ್ವ ಸಂಸ್ಥೆಗಳಾವುವು (ವಿವರಗಳನ್ನು ಒದಗಿಸುವುದು)?

ಶ್ರೀ ಪಿ. ಸಿ. ಸಿದ್ದನಗೌಡರ್ (ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ರಾಜ್ಯ ಸಚಿವರು.) :-

ಅ) ಭಾರತ ಸರ್ಕಾರದ 1989 ನೇ ಸಾಲಿನಲ್ಲಿ ಡ್ಯಾನಿಡಾ ಸರ್ಕಾರವು ದಕ್ಷಿಣ ಕನ್ನಡ ಜಿಲ್ಲೆಯ ಪರಿಸರ ಅಧ್ಯಯನ ಯೋಜನೆಯನ್ನು ಕರ್ನಾಟಕ ಸರ್ಕಾರದೊಂದಿಗೆ ಮಾಡಬೇಕೆಂದು ಕೇಳಿಕೊಂಡಿತ್ತು. ಅವರಂತೆ ಜನವರಿ 1993 ನೇ ಸಾಲಿನಲ್ಲಿ ಇಂತಹ ಒಂದು ಯೋಜನೆಯೊಂದನ್ನು ಪ್ರಾರಂಭಿಸಲಾಯಿತು.

ಇಂತಹ ಒಂದು ಯೋಜನೆಯ ಮಾರ್ಗದರ್ಶನದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಪರಿಸರ ಮಾಲಿನ್ಯವನ್ನು ತಡೆಗಟ್ಟುವುದು ಮುಖ್ಯೋದ್ದೇಶವಾಗಿರುತ್ತದೆ. ಇಂತಹ ಪರಿಸರ ಅಧ್ಯಯನ ಯೋಜನೆಯಿಂದ ಈ ಜಿಲ್ಲೆಯ ಉಪಯೋಗಕ್ಕೆ ನೈಸರ್ಗಿಕ ಸಂಪನ್ಮೂಲಗಳಿಂದ ಉಪಯೋಗವಾಗುವಂತಹ ಸೂಚನೆಗಳನ್ನು ವರದಿಯಲ್ಲಿ ಕೊಟ್ಟಿದ್ದಾರೆ.

ಈ ಯೋಜನೆಯು ಜನವರಿ 1995 ರಲ್ಲಿ ಮುಕ್ತಾಯಗೊಂಡು 21 ಅಂಶಗಳನ್ನೊಳ ಗೊಂಡ ಅಧ್ಯಯನದ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿದ್ದಾರೆ. ಇದಕ್ಕೆ ಪ್ರೋತ್ಸಾಹವನ್ನು ನೀಡು ವುದಕ್ಕಾಗಿ ಸರ್ಕಾರವು ಪತ್ರ ವ್ಯವಹಾರಗಳನ್ನು ನಡೆಸುತ್ತಿದೆ.

ಆ) ದಕ್ಷಿಣ ಕನ್ನಡ ಜಿಲ್ಲೆಯ ಅಭಿವೃದ್ಧಿಗಾಗಿ ದಕ್ಷಿಣ ಕನ್ನಡ ಜಿಲ್ಲೆಯ ಸಮಗ್ರ ಅಧ್ಯಯನ ತಂಡವು 21 ಮಾರ್ಗಸೂಚಿಗಳನ್ನೊಳಗೊಂಡು ವರದಿಯೊಂದನ್ನು ಸರ್ಕಾರಕ್ಕೆ ಒಪ್ಪಿ ಸಿರುತ್ತದೆ. ಈ 21 ಅಂಶಗಳನ್ನು ಪರಿಶೀಲಿಸಲಾಗುತ್ತಿದ್ದು, ಪರಿಸರ ಸಮಗ್ರ ಅಧ್ಯಯನ ತಂಡವು ಸೂಚಿಸಿದಂತೆ ಕೆಲವು ಅಂಶಗಳನ್ನು ಅವುಗಳ ಜೇಷ್ಠತೆಯ ಆಧಾರದ ಮೇಲೆ ಸಂಬಂಧಿತ ಇಲಾಖೆಗಳ ಸಹಯೋಗದಿಂದ ಅನುಷ್ಠಾನಗೊಳಿಸಲು ಪರಿಶೀಲಿಸಲಾಗುತ್ತಿದೆ. ಈ ಹಂತದಲ್ಲಿ ಈ ಕಾರ್ಯಕ್ರಮದಲ್ಲಿ ಭಾಗಿಯಾಗಿರುವ ಇಲಾಖೆಗಳು ಆಯವ್ಯಯ ವೆಚ್ಚವನ್ನು-ಪುನರ್ ವಿಂಗ ಡೆಯನ್ನು ಮಾಡುವುದು, ಮತ್ತು ಸರ್ಕಾರದ ಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಕಾರ್ಯೋ ನ್ಮುಖವಾಗುವುದು.

ಈಗಾಗಲೇ ಮೇಲೆ ಹೇಳಿರುವಂತೆ ಕಾರ್ಯೋನ್ಮುಖಕ್ಕೆ ಬೇಕಾಗುವಂತಹ ಅಂಶಗಳ ಬಗ್ಗೆ ಎಲ್ಲಾ ಇಲಾಖಾ ಮುಖ್ಯಸ್ಥರೊಡನೆ ಚರ್ಚಿಸಲಾಗುವುದು.

ಇ) ದಕ್ಷಿಣ ಕನ್ನಡ ಜಿಲ್ಲೆಯ ಸಮಗ್ರ ಅಧ್ಯಯನ ತಂಡವು ಈಗಾಗಲೇ ನೀಡಿರುವ ವರದಿಯು ಸರ್ಕಾರದ ಪರಿಶೀಲನೆಯಲ್ಲಿದೆ.

ಇತರೆ ಯಾವುದೇ ವಿದೇಶಿ ಸಹಭಾಗಿತ್ವ ಸಂಸ್ಥೆಗಳು ಈ ಇಲಾಖೆಯಲ್ಲಿ ಇರುವುದಿಲ್ಲ.

ಅನುಬಂಧ

1) ನೀರಿನ ಸಂಪನ್ಮೂಲ ಮತ್ತು ಅದರ ಬಳಕೆ
2) 10,13 ಉದ್ದಿಮೆಗೆ ಬೇಕಾಗುವಂತಹ ಪರಿಸರದ ವ್ಯವಸ್ಥೆ
3) ಜೈವಿಕ ಶಾಸ್ತ್ರದ ನಿರ್ವಹಣೆ ಹಾಗೂ ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಗೆ ಆರ್ಥಿಕ ಉದ್ದಿಮೆಗಳ ಬಳಕೆ.
4) ಭೂ ಉಪಯೋಗ
5) ಕರಾವಳಿ ಪ್ರದೇಶದ ಉಸ್ತುವಾರಿಕೆ ಹಾಗೂ ನಿರ್ವಹಣೆ
6) ಕಡಲತೀರದ ಮೀನುಗಾರಿಕೆಯ ಉಸ್ತುವಾರಿಕೆ ಹಾಗೂ ನಿರ್ವಹಣೆ
7) (ಅ) ಪಶ್ಚಿಮ ಘಟ್ಟದ ಜೈವಿಕ ವೈವಿದ್ಯತೆಯ ಸಂರಕ್ಷಣೆ ಮತ್ತು ನಿರ್ವಹಣೆ
   (ಆ) ನೀರಿನ ಜಲಚರ ಜೈವಿಕ ವೈವಿದ್ಯತೆಯ ಸಂರಕ್ಷಣೆ ಮತ್ತು ನಿರ್ವಹಣೆ
8) ವ್ಯರ್ಥ ಘನ ಪದಾರ್ಥಗಳ ನಿರ್ವಹಣೆ
9) ಮಂಗಳೂರು ಒಳಚರಂಡಿ 2 ನೇ ಘಟ್ಟದ ಅಭಿವೃದ್ಧಿ ಹಾಗೂ ಇತರ ನಗರಗಳ ಒಳಚರಂಡಿ ವ್ಯವಸ್ಥೆಗಳ ವಿಶ್ಲೇಷಣೆ

10) ಇಂಧನಕೋಸ್ಕರ ಪರಿಸರ ನಿರ್ವಹಣೆ

11) ಸಂಚಾರಕ್ಕೋಸ್ಕರ ಪರಿಸರ ನಿರ್ವಹಣೆ

12) ಅರಣ್ಯ ಹಾಗೂ ಸಾಮಾನ್ಯ ಭೂಮಿಯ ನಿರ್ವಹಣೆ

13) 17,18 ಕೃಷಿ ಉತ್ಪಾದನೆಗೋಸ್ಕರ ನೈಸರ್ಗಿಕ ಸಂಪನ್ಮೂಲ ಹಾಗೂ ಜೀವಿ ಪರಿಸ್ಥಿತಿಯ ಸಮಗ್ರವಾದ ಬಳಕೆ.

14) ಸಾರ್ವಜನಿಕರಲ್ಲಿ ಜನ ಜಾಗೃತಿಯನ್ನು ಹೆಚ್ಚಿಸುವುದು ಹಾಗೂ ಪರಿಸರ ವಿಷಯಗಳಲ್ಲಿ ಪಾಲುಗೊಳ್ಳುವುದು.

15) ವೃತ್ತಿ ನಿರತ ಆರೋಗ್ಯ ಮತ್ತು ರಕ್ಷಣೆಯನ್ನು ಬಲಪಡಿಸುವುದು

16) ಪರಿಸರ ಸಮನ್ವಯ ನಿರ್ವಹಣೆಗಾಗಿ ವ್ಯವಸ್ಥೆ ಮತ್ತು ವಿಧಾನಗಳನ್ನು ಬಲಪಡಿಸುವುದು.

17) ವಿಸ್ತೃತ ತರಬೇತಿ ಕಾರ್ಯಕ್ರಮ.

ವಿಷಯ :- ಕೇರಳ ಎಲೆಕ್ಟ್ರಿಕಲ್ ಮತ್ತು ಅಲೈಡ್ ಇಂಜಿನಿಯರಿಂಗ್ ಸಂಸ್ಥೆಯಿಂದ ಜನರೇಟರ್‌ಗಳ ಖರೀದಿ.

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2393 (2999)

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) :- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ನಗರಾಭಿವೃದ್ಧಿ ಮಂಡಳಿಗೆ ಕೇರಳ ಎಲೆಕ್ಟ್ರಿಕಲ್ಸ್ ಮತ್ತು ಅಲೈಡ್ ಇಂಜಿನಿಯರಿಂಗ್ ಸಂಸ್ಥೆಯು 1994 ರಲ್ಲಿ 250 ಕೆ.ವಿ.ಎ.ದ ಎರಡು ಜನರೇಟರ್‌ಗಳನ್ನು ಕೊಂಡಿರುವುದು ನಿಜವೆ ; ಹಾಗಿದ್ದಲ್ಲಿ ಈ ಜನರೇಟರ್‌ಗಳಿಗೆ ನೀಡಿದ ಮೊತ್ತವೆಷ್ಟು ;

ಆ) ಈ ಜನರೇಟರ್‌ಗಳು ಸರಬರಾಜಾದ ಕೇವಲ ಒಂದು ವರ್ಷದಲ್ಲಿ ದುರಸ್ಥಿಗೆ ಬಂದಿದ್ದು ಇಂತಹ ದೋಷಾಯುಕ್ತ ಮೆಷಿನರಿ ಖರೀದಿಗೆ ಸಂಬಂದಪಟ್ಟವರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆಯೇ ದುರಸ್ತಿಗೆ ಎಷ್ಟು ಹಣ ಖರ್ಚು ಮಾಡಲಾಗಿದೆ ಈ ಹಣವನ್ನು ಯಾರಿಂದ ವಸೂಲಿ ಮಾಡಲಾಗಿದೆ?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು):-

ಅ) ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಮೆ : ಕೇರಳ ಎಲೆಕ್ಟ್ರಿಕಲ್ಸ್ ಮತ್ತು ಅಲೈಡ್ ಇಂಜಿನಿಯರಿಂಗ್ ಕಂಪನಿ ಲಿ ; ಕೊಚ್ಚಿನ್ ಸಂಸ್ಥೆಯವರಿಂದ 1994 ರಲ್ಲಿ ಒಂದು ಟ್ರಾನ್ಸ್ಫಾರ್ಮರಿಗೆ ರೂ. 1,19,000-00 ಗಳಂತೆ (ತೆರಿಗೆ ರಹಿತ) 28 ಸಂಖ್ಯೆಯ 250 ಕೆ.ವಿ.ಎ. (ಜನರೇಟರ್‌ಗಳಲ್ಲಿ) ಟ್ರಾನ್ಸ್ಫಾರ್ಮರುಗಳನ್ನು ಖರೀದಿಸಿದೆ. ಇಲ್ಲಿಯವರೆಗೆ ಸಂಬಂದಿತರಿಗೆ ರೂ. 31,53,205-00 ಗಳು ಪಾವತಿಯಾಗಿರುತ್ತದೆ.